ವಿಶ್ವಮಾನವ ಎಜುಕೇಷನ್ ಸೊಸೈಟಿ (ರಿ.)

# ಸ್ಪರ್ಧಾ ಕರ್ನಾಟಕ

## ಕೋಚಿಂಗ್ ಸೆಂಟರ್

## IAS / KAS Academy

## Spardha Karnataka School Of Banking

ವಿನಾಯಕ ಕಾಂಪ್ಲೆಕ್ಸ್, ಕರ್ನಾಟಕ ಸಂಘ, ಬಿ.ಹೆಚ್. ರಸ್ತೆ, ಶಿವಮೊಗ್ಗ

---

**Name:** ____________________________________________

**Sub:** TET - Child Development & Pedogogy Question Papers from 2014 to 2017 (6-8$^{TH}$ Standard )

**Phone No :** ____________________________________________

**Course Opted :** ____________________________________________

**RUN WITH GOAL**

Email :spardhakarnatakasmg@gmail.com

**Mob:9071673831/9071673832**

**TET -15-01-2017 Paper - Child Development & Pedogogy 6-8th Standard**

**1. ಸುಮಳು ಪ್ರತಿ ಪಾಠವನ್ನು ಚುರುಕಾಗಿ ಕಲಿಯುವಳು, ಆದರೆ ಲೀಲಾಳು ಅದೇ ಪಾಠವನ್ನು ಕಲಿಯಲು ಹೆಚ್ಚು ಸಮಯ ತೆಗೆದುಕೊಳ್ಳುವಳು. ಇದು ವಿಕಾಸದ ಈ ತತ್ವವನ್ನು ಪ್ರತಿಬಿಂಬಿಸುತ್ತದೆ.**
(ಎ) ನಿರಂತರತೆ (ಬಿ) ಸಾಮಾನ್ಯತೆಯಿಂದ ನಿರ್ದಿಷ್ಟತೆಗೆ (ಸಿ) ವೈಯಕ್ತಿಕ ಭಿನ್ನತೆ (ಡಿ) ಪರಸ್ಪರ ಸಂಬಂಧ

**2. ವ್ಯಕ್ತಿಯಲ್ಲಿ ಸಂಘರ್ಷವನ್ನುಂಟು ಮಾಡುವ ಆಲೋಚನೆಗಳನ್ನು ಮನಸ್ಸಿನ ಜಾಗೃತ ಭಾಗದಿಂದ ಅಜಾಗೃತ ಭಾಗಕ್ಕೆ ತಳ್ಳಲ್ಪಡುವ ಪ್ರಕ್ರಿಯೆಯೇ**
(ಎ) ಪ್ರಕ್ಷೇಪಣೆ (ಬಿ) ದಮನ (ಸಿ) ಹಿಮ್ಮರಳುವಿಕೆ (ಡಿ) ತರ್ಕಸಮ್ಮತವಾಗಿಸುವಿಕೆ

**3. ಈ ಕೆಳಗಿನ ಯಾವುದು ಸಮೂಹದ ಲಕ್ಷಣವಲ್ಲ ?**
(ಎ) ಹಲವು ಸದಸ್ಯರಿಂದ ಕೂಡಿದ ಒಂದು ಸಾಮಾಜಿಕ ಘಟಕ (ಬಿ) ತನ್ನದೇ ಆದ ನಾಯಕತ್ವ ನಮೂನೆ
(ಸಿ) ಸಮೂಹದ ಸದಸ್ಯರು ಸಮಾನ ಗುರಿ ಹೊಂದಿರುತ್ತಾರೆ. (ಡಿ) ಪ್ರತಿಯೊಬ್ಬ ಸದಸ್ಯನು ನಿರ್ದಿಷ್ಟ ಪಾತ್ರ ನಿರ್ವಹಿಸುವುದಿಲ್ಲ.

**4. ಈ ರೀತಿಯ ಉಭಯ ಸಂಕಟದಲ್ಲಿ ಎರಡೂ ಆಯ್ಕೆಗಳು ಉತ್ತಮ ಆಯ್ಕೆಯಾಗಿರುತ್ತವೆ.**
(ಎ) ಆಗಮ – ಆಗಮ ದ್ವಂದ್ವ (ಬಿ) ಆಗಮ– ಅಪಗಮ ದ್ವಂದ್ವ
(ಸಿ) ಆಪಗಮ– ಅಪಗಮ ದ್ವಂದ್ವ (ಡಿ) ಆಗಮ – ಅಪಗಮದ್ವಯ ದ್ವಂದ್ವ

**5. ಕೋಹ್ಲಬರ್ಗ್‌ರವರ ಪ್ರಕಾರ ಜ್ಞಾನಾತ್ಮಕ ಪ್ರಕ್ರಿಯೆಗಳಾದ ಆಲೋಚನೆ ಮತ್ತು ತಾರ್ಕಿಕತೆ ಮಗುವಿನ ಈ ವಿಕಾಸದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.**
(ಎ) ದೈಹಿಕ ವಿಕಾಸ (ಬಿ) ಬೌದ್ಧಿಕ ವಿಕಾಸ
(ಸಿ) ನೈತಿಕ ವಿಕಾಸ (ಡಿ) ಸಾಮಾಜಿಕ ವಿಕಾಸ

**6. ಜೀನ್ ಪಿಯಾಜೆಯವರ ಪ್ರಕಾರ ಮಗುವು ಗಾತ್ರ ಮತ್ತು ವಸ್ತುವಿನ ಆಕಾರಕ್ಕೆ ಸಂಬಂಧಿಸಿದಂತೆ ಪರಿಕಲ್ಪನೆಗಳನ್ನು ಬೆಳೆಸಿಕೊಳ್ಳುವ ಹಂತ**
(ಎ) ಸಂವೇದನಾ ಗತಿ ಹಂತ (ಬಿ) ಕಾರ್ಯಪೂರ್ವ ಹಂತ
(ಸಿ) ಮೂರ್ತ ಕಾರ್ಯಗಳ ಹಂತ (ಡಿ) ಔಪಚಾರಿಕ ಕಾರ್ಯಗಳ ಹಂತ

**7. ಕಲಿಕೆಯ ಸಾಮಾಜಿಕ ಸಂರಚನಾವಾದವನ್ನು ಮಂಡಿಸಿದವರು**
(ಎ) ವೈಗೋಟ್‌ಸ್ಕಿ (ಬಿ) ಜೆರೋಮ್ ಬ್ರೂನರ್ (ಸಿ) ಬಂಡೂರ (ಡಿ) ಗ್ಯಾನೆ

**8. ನೈತಿಕ ಬೆಳವಣಿಗೆಯ ಸಿದ್ಧಾಂತವನ್ನು ಪ್ರತಿಪಾದಿಸಿದವರು**
(ಎ) ಬಂಡೂರ (ಬಿ) ಕೋಲ್ ಬರ್ಗ್ (ಸಿ) ಬ್ರೂನರ್ (ಡಿ) ಗ್ಯಾನೆ

**9. ಇವುಗಳಲ್ಲಿ ಯಾವುದು ಸಮಂಜಸತೆಯ ಅರ್ಥವನ್ನು ಕೊಡುತ್ತದೆ ?**
(ಎ) ಪರೀಕ್ಷೆಯ ಅಳತೆ ಮಾಡಬೇಕಾದುದನ್ನೇ ಅಳೆದರೆ (ಬಿ) ಪರೀಕ್ಷೆಯ ಅಳತೆಯಲ್ಲಿ ಸ್ಥಿರತೆಯನ್ನು ತೋರುವಿಕೆ
(ಸಿ) ಅಳತೆಯನ್ನು ಸುಲಭವಾಗಿ ಮಾಡುವಿಕೆ (ಡಿ) ಮತ್ತೆ ಮತ್ತೆ ಅಳೆದಾಗ ಅಳತೆಯಲ್ಲಿ ವ್ಯತ್ಯಾಸ ತೋರುವಿಕೆ

**10. ವಿದ್ಯಾರ್ಥಿಗಳ ಬಲಗಳು ಮತ್ತು ನ್ಯೂನ್ಯತೆಗಳನ್ನು ಪತ್ತೆಹಚ್ಚಲು ಬಳಸುವ ಪರೀಕ್ಷೆ.**
(ಎ) ಪ್ರಮಾಣಬದ್ಧಗೊಳಿಸಿದ ಪರೀಕ್ಷೆ (ಬಿ) ಕ್ಲಿನಿಕಲ್ ಪರೀಕ್ಷೆ
(ಸಿ) ಸಾಧನಾ ಪರೀಕ್ಷೆ (ಡಿ) ನೈದಾನಿಕ ಪರೀಕ್ಷೆ

**11. ಒಂದು ಆರು ವರ್ಷ ಮಾನಸಿಕ ವಯಸ್ಸುಳ್ಳ ಮಗುವು ನಾಲ್ಕು ವರ್ಷ ವಯಸ್ಸಿನ ಮಗುವಾಗಿದ್ದರೆ ಅವರನ್ನು ನಾವು ಹೀಗೆಂದು ಕರೆಯಬಹುದು.**
(ಎ) ಸಾಧಾರಣಕ್ಕಿಂತ ಮೇಲ್ಪಟ್ಟು (ಬಿ) ಸಾಧಾರಣ (ಸಿ) ಪ್ರತಿಭಾವಂತ (ಡಿ) ದಡ್ಡ

**12. ಬ್ಲೂಮ್‌ನ ಪರಿಷ್ಕೃತ ಬೋಧನಾ ಉದ್ದೇಶದ ವರ್ಗೀಕರಣದ ಪ್ರಕಾರ ಜ್ಞಾನಾತ್ಮಕ ಪ್ರಕ್ರಿಯೆಯ ಅತ್ಯನ್ನತ ಹಂತವು**
(ಎ) ಅರ್ಥಮಾಡಿಕೊಳ್ಳುವುದು (ಬಿ) ಮೌಲ್ಯಮಾಪನ (ಸಿ) ಸೃಷ್ಟಿಸುವುದು
(ಡಿ) ಸಂಶ್ಲೇಷಿಸುವುದು.

**13. ಬಹುಮುಖ ಬುದ್ಧಿಶಕ್ತಿ ಸಿದ್ಧಾಂತದ ಪ್ರಕಾರ ಎಲ್ಲಾ ರೀತಿಯ ಪ್ರಾಣಿಗಳನ್ನು, ಲವಣಗಳನ್ನು ಮತ್ತು ಸಸ್ಯಗಳನ್ನು ಗುರುತಿಸುವ ಹಾಗೂ ವರ್ಗೀಕರಿಸುವ ಸಾಮರ್ಥ್ಯವನ್ನು ಹೀಗೆ ಕರೆಯುವರು.**
(ಎ) ನೈಸರ್ಗಿಕ ಬುದ್ಧಿಶಕ್ತಿ (ಬಿ) ಶಾಬ್ದಿಕ ಭಾಷಾ ಬುದ್ಧಿಶಕ್ತಿ
(ಸಿ) ಅಂತರ್ ವ್ಯಕ್ತ ಬುದ್ಧಿಶಕ್ತಿ (ಡಿ) ತಾರ್ಕಿಕ ಬುದ್ಧಿಶಕ್ತಿ

**14. ವಿಷಯ ಸಂಜ್ಞಾನ ಪರೀಕ್ಷೆಯು ಅಳೆಯುವುದು**
(ಎ) ಮನೋವೃತ್ತಿ (ಬಿ) ವ್ಯಕ್ತಿತ್ವ (ಸಿ) ಸೃಜನಶೀಲತೆ (ಡಿ) ಬುದ್ಧಿಶಕ್ತಿ

**15. ಬುದ್ಧಿಶಕ್ತಿ ಕಾರ್ಯ ನಿರ್ವಹಣಾ ಪರೀಕ್ಷೆಯು ಈ ಸಾಮರ್ಥ್ಯವನ್ನು ಅಳೆಯುತ್ತದೆ.**
(ಎ) ಸಂಖ್ಯೆ ಸಂಬಂಧ (ಬಿ) ಭಾಷೆ (ಸಿ) ಸೃಜನಶೀಲತೆ (ಡಿ) ಕೈಚಳಕ

**16. ತರುಣರ ಸಾಮಾಜಿಕ ಬೆಳವಣಿಗೆಗೆ ಉದಾಹರಣೆ ಎಂದರೆ**
(ಎ) ಸಾಹಸ ಪ್ರವೃತ್ತಿ (ಬಿ) ಬೆಳವಣಿಗೆಯ ಬುಗ್ಗೆ (ಸಿ) ಗುಂಪು ರಚನೆ (ಡಿ) ವಿಮರ್ಶಾತ್ಮಕ ಸಾಮರ್ಥ್ಯ

**17. ನ್ಯೂನ್ಯತೆಯುಳ್ಳ ಮಕ್ಕಳಿಗಾಗಿ ಇರುವ ಕೇಂದ್ರೀಯ ನಿಯೋಜಿತ ಸಮಗ್ರ ಶಿಕ್ಷಣದ ಮೂಲಕ ಶೈಕ್ಷಣಿಕ ಅವಕಾಶಗಳನ್ನು ಇಲ್ಲಿ ನೀಡುವ ಗುರಿ ಹೊಂದಿದೆ.**

(ಎ) ಸಾಮಾನ್ಯ ಶಾಲೆಗಳು (ಬಿ) ವಿಶೇಷ ಶಾಲೆಗಳು

(ಸಿ) ಮುಕ್ತ ಶಾಲೆಗಳು (ಡಿ) ಅಂಧ ಪರಿಹಾರ ಶಾಲೆಗಳು

**18. ಸೃಜನಶೀಲತೆಯು ಸಾಮಾನ್ಯವಾಗಿ ಇದಕ್ಕೆ ಸಂಬಂಧಿಸಿದೆ.**

(ಎ) ಏಕಮುಖ ಚಿಂತನೆ (ಬಿ) ಬಹುಮುಖ ಚಿಂತನೆ (ಸಿ) ಮಾದರೀಕರಣ (ಡಿ) ಅನುಕರಣೆ

**19. ಪರಿಣಾಮಕಾರಿ ಸಮನ್ವಯತೆಯ ಕೆಳಗಿನ ಒಂದನ್ನು ಬಿಟ್ಟು ಉಳಿದವನ್ನೊಳಗೊಂಡಿದೆ.**

(ಎ) ಸಾಮರ್ಥ್ಯ ಬೆಳವಣಿಗೆ (ಬಿ) ಸೂಕ್ಷ್ಮಗ್ರಾಹೀಕರಣ

(ಸಿ) ಪ್ರತ್ಯೇಕಿಸುವುದು (ಡಿ) ಪೋಷಕರನ್ನೊಳಗೊಳ್ಳುವುದು

**20. ಡಿಸ್‌ಗ್ರಾಫಿಯಾವು ಮುಖ್ಯವಾಗಿ ಇದಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನೊಳಗೊಂಡಿದೆ.**

(ಎ) ಮಾತನಾಡುವುದು (ಬಿ) ಮಾತನಾಡುವುದು ಮತ್ತು ಕೇಳಿಸಿಕೊಳ್ಳುವುದು

(ಸಿ) ಬರವಣಿಗೆ (ಡಿ) ಓದುವುದು

**21. ಆಶ್ರಿತ ಮಾನಸಿಕ ನ್ಯೂನ್ಯತೆಯುಳ್ಳ ಮಕ್ಕಳ ಬುದ್ಧಿಶಕ್ತಿ ಸೂಚ್ಯಂಕವು**

(ಎ) 90–109 (ಬಿ) 20–25 (ಸಿ) 80–85 (ಡಿ) 30–35

**22. ವೀಕ್ಷಣಾ ಕಲಿಕೆಯಲ್ಲಿನ ಅನುಸರಿಸಬೇಕಾದ ಹಂತಗಳ ಅನುಕ್ರಮವು**

(ಎ) ಕಾರ್ಯನಿರ್ವಹಣೆ. ಪರಿಣಾಮಗಳು, ಅರ್ಜನೆ, ಧಾರಣೆ (ಬಿ) ಧಾರಣೆ, ಅರ್ಜನೆ, ಪರಿಣಾಮಗಳು, ಕಾರ್ಯನಿರ್ವಹಣೆ

(ಸಿ) ಪರಿಣಾಮಗಳು, ಕಾರ್ಯನಿರ್ವಹಣೆ, ಧಾರಣೆ, ಅರ್ಜನೆ (ಡಿ) ಅರ್ಜನೆ, ಧಾರಣೆ, ಕಾರ್ಯನಿರ್ವಹಣೆ, ಪರಿಣಾಮಗಳು.

**23. ಪರಿಕಲ್ಪನೆಗಳ ಬೆಳವಣಿಗೆಯು ಮೂಲತಃ ಇದರ ಅಂಗವಾಗಿದೆ.**

(ಎ) ಭಾವನಾತ್ಮಕ ಬೆಳವಣಿಗೆ (ಬಿ) ಬೌದ್ಧಿಕ ಬೆಳವಣಿಗೆ

(ಸಿ) ಶಾರೀರಿಕ ಬೆಳವಣಿಗೆ (ಡಿ) ಸಾಮಾಜಿಕ ಬೆಳವಣಿಗೆ

**24. ಪೂರ್ವಕಲಿಕೆಯ ಹೊಸ ಸನ್ನಿವೇಶದ ಕಲಿಕೆಯಲ್ಲಿ ಯಾವ ರೀತಿಯ ವ್ಯತ್ಯಾಸವನ್ನು ಮಾಡದಿದ್ದರೆ, ಅದನ್ನು ಹೀಗೆನ್ನಬಹುದು.**

(ಎ) ಧನಾತ್ಮಕ ಕಲಿಕೆಯ ವರ್ಗಾವಣೆ (ಬಿ) ಋಣಾತ್ಮಕ ಕಲಿಕೆಯ ವರ್ಗಾವಣೆ

(ಸಿ) ಶೂನ್ಯ ಕಲಿಕೆಯ ವರ್ಗಾವಣೆ (ಡಿ) ಪಾರ್ಶ್ವ ವರ್ಗಾವಣೆ

**25. ಗ್ಯಾನೆಯವರ ಪ್ರಕಾರ ಉನ್ನತ ಮಟ್ಟದ ಕಲಿಕೆಯು**

(ಎ) ಸಮಸ್ಯೆ ಪರಿಹಾರ (ಬಿ) ಪರಿಕಲ್ಪನೆಗಳ ಕಲಿಕೆ (ಸಿ) ಸರಪಳಿ (ಡಿ) ನಿಯಮ ಕಲಿಕೆ

**26. ಪರಿಕಲ್ಪನಾ ಸಾಧನೆ ಮಾದರಿಯನ್ನು ಪ್ರತಿಪಾದಿಸಿದವರು.**

(ಎ) ಬಂಡೂರ (ಬಿ) ಬ್ರೂನರ್ (ಸಿ) ಗ್ಯಾನೆ (ಡಿ) ಕೋಲ್‌ಬರ್ಗ್

**27. ಹಿಂದೆ ಕಲಿತದ್ದನ್ನು ಧಾರಣಿಸಿ, ಪುನಃ ಸ್ಮರಣೆಗೆ ತರುವುದೇ**

(ಎ) ವಿಸ್ಮೃತಿ (ಬಿ) ಅಭಿಪ್ರೇರಣೆ (ಸಿ) ಸ್ಮೃತಿ (ಡಿ) ಅವಧಾನ

**28. ಆರ್ಕಿಮಿಡೀಸನು 'ಯುರೇಕಾ!' ಎಂದು ಕೂಗುತ್ತಾ ಓಡಿಬಂದನು. ಇದರಲ್ಲಿ ಯಾವ ವಿಧದ ಕಲಿಕೆಯು ಅಡಗಿದೆ ?**

(ಎ) ವೀಕ್ಷಣಾ ಕಲಿಕೆ (ಬಿ) ಯತ್ನ– ದೋಷ ಕಲಿಕೆ (ಸಿ) ಅನುಬಂಧ ಕಲಿಕೆ (ಡಿ) ಒಳನೋಟ ಕಲಿಕೆ

**29. ಕಾರ್ಯಕ್ರಮಾನ್ವಯ ಕಲಿಕೆಯು ಆಧರಿಸಿರುವುದು**

(ಎ) ಕ್ರಿಯಾಜನ್ಯ ಅನುಬಂಧ (ಬಿ) ಯತ್ನ– ದೋಷ ಕಲಿಕೆ

(ಸಿ) ಒಳನೋಟ ಕಲಿಕೆ (ಡಿ) ಶಾಸ್ತ್ರೀಯ ಅನುಬಂಧ

**30. ಈ ಕೆಳಗಿನ ಯಾವುದು ಕ್ರಿಯಾ ಸಂಶೋಧಕನನ್ನು ಕ್ರಿಯಾಯೋಜನೆಗೆ ನಿರ್ದೇಶಿಸುತ್ತದೆ ?**

(ಎ) ಸಂಭವನೀಯ ಕಾರಣಗಳ ವಿಶ್ಲೇಷಣೆ (ಬಿ) ಕ್ರಿಯಾಪ್ರಾಕಲ್ಪನೆಯನ್ನು ನಿರೂಪಿಸುವುದು

(ಸಿ) ಪೂರ್ವ ಪರೀಕ್ಷಾದತ್ತದ ವಿಶ್ಲೇಷಣೆ (ಡಿ) ಸಮಸ್ಯೆಯನ್ನು ನಿರ್ದಿಷ್ಟಗೊಳಿಸುವುದು.

## ಕೀ – ಉತ್ತರಗಳು

| | | | | | |
|---|---|---|---|---|---|
| 1 | ಸಿ | 11 | ಸಿ | 21 | ಬಿ |
| 2 | ಬಿ | 12 | ಸಿ | 22 | ಡಿ |
| 3 | ಡಿ | 13 | ಎ | 23 | ಬಿ |
| 4 | ಎ | 14 | ಬಿ | 24 | ಸಿ |
| 5 | ಸಿ | 15 | ಡಿ | 25 | ಎ |
| 6 | ಸಿ | 16 | ಸಿ | 26 | ಬಿ |
| 7 | ಎ | 17 | ಎ | 27 | ಸಿ |
| 8 | ಬಿ | 18 | ಬಿ | 28 | ಡಿ |
| 9 | ಎ | 19 | ಸಿ | 29 | ಎ |
| 10 | ಡಿ | 20 | ಡಿ | 30 | ಬಿ |

**TET -2015 Paper - Child Development & Pedogogy 6-8th Standard**

**1. ಮೆದುಳನ್ನು ಕಾರ್ಯ ಪಟುತ್ವಗೊಳಿಸುವ ತಂತ್ರವನ್ನು ಈ ವಿದ್ಯಾರ್ಥಿಗಳಿಗೆ ಉಪಯೋಗಿಸುವರು.**
(ಎ) ಮಂದಗತಿಯಲ್ಲಿ ಕಲಿಯುವವರು (ಬಿ) ಸೃಜನಶೀಲ ಮಕ್ಕಳು
(ಸಿ) ಮಾನಸಿಕ ಸವಾಲುಳ್ಳ ಮಕ್ಕಳು (ಡಿ) ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳು

**2. ಕಲಿಕೆಯಲ್ಲಿ ಹಿಂದುಳಿಯುವಿಕೆಯು ಕೆಳಗಿನ ಒಂದನ್ನು ಬಿಟ್ಟು ಯಾವುದರಿಂದಲಾದರೂ ಉಂಟಾಗಬಹುದು**
(ಎ) ಶಿಕ್ಷಕರ ಬೋಧನಾ ರೀತಿಯಿಂದ (ಬಿ) ಮಂದಬುದ್ಧಿಯಿಂದ
(ಸಿ) ಪ್ರಸವಪೂರ್ವ ಹಂತದಲ್ಲಿ ಮದ್ಯಪಾನ ಮಾಡುವುದರಿಂದ (ಡಿ) ಶೈಶವಾವಸ್ಥೆಯಲ್ಲಿನ ಮಾನಸಿಕ ಕಾಯಿಲೆಯಿಂದ

**3. ಸುಮಂತನು ಆಟದ ಸಾಮಾನುಗಳನ್ನು ಒಡೆದು ಅದರಲ್ಲಿರುವ ಭಾಗಗಳನ್ನು ತಿಳಿಯಲು ಬಿಚ್ಚುತ್ತಾನೆ. ನೀವು ಏನು ಮಾಡುವಿರಿ**
(ಎ) ಅವನ ಕುತೂಹಲವನ್ನು ಪ್ರೋತ್ಸಾಹಿಸಿ ಅವನ ಶಕ್ತಿಯನ್ನು ಉದಾತ್ತೀಕರಿಸುವಿರಿ.
(ಬಿ) ಸುಮಂತನು ಆಟವಾಡುವುದಕ್ಕೆ ಬಿಡುವುದೇ ಇಲ್ಲ.
(ಸಿ) ಯಾವಾಗಲೂ ಹತ್ತಿರದಿಂದ ವೀಕ್ಷಿಸುತ್ತೀರಿ
(ಡಿ) ಅವನಿಗೆ ಆಟದ ಸಾಮಾನುಗಳನ್ನು ಒಡೆದು ಹಾಕಬಾರದೆಂದು ಅರ್ಥ ಮಾಡಿಸುವಿರಿ.

**4. ಕೆಲವು ಕಹಿ ಅನುಭವಗಳ ನಂತರ ಮಗುವೊಂದು ಶಿಕ್ಷಕರನ್ನು ದ್ವೇಷಿಸಲು ಪ್ರಾರಂಭಿಸುತ್ತದೆ ಇದು ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ?**
(ಎ) ಜ್ಞಾನಾತ್ಮಕ ವರ್ತನೆ (ಬಿ) ಕ್ರಿಯಾತ್ಮಕ ವರ್ತನೆ
(ಸಿ) ಭಾವನಾತ್ಮಕ ವರ್ತನೆ (ಡಿ) ಪ್ರತಿಫಲನಾತ್ಮಕ ವರ್ತನೆ

**5. ಈ ಕೆಳಗಿನವುಗಳಲ್ಲಿ ಯಾವುದು ಮಕ್ಕಳ ಮಾನಸಿಕ ಆರೋಗ್ಯವನ್ನು ಕಾಪಾಡುವಲ್ಲಿ ಶಿಕ್ಷಕನಿಗೆ ಸಹಕಾರಿಯಾಗಿದೆ ?**
(ಎ) ಅತಿಯಾದ ಶಿಸ್ತನ್ನು ಜಾರಿಗೊಳಿಸುವುದು (ಬಿ) ಅನಾರೋಗ್ಯಕರ ಸ್ಪರ್ಧೆಯನ್ನು ತಡೆಗಟ್ಟುವುದು
(ಸಿ) ಬೇರೆ ಮಕ್ಕಳೊಂದಿಗೆ ಹೋಲಿಸುವುದು (ಡಿ) ಸಂಪೂರ್ಣತೆಗೆ ಅತಿಯಾದ ಒತ್ತು ನೀಡುವುದು.

**6. 'ಪರೀಕ್ಷೆಯಲ್ಲಿ ಅನುತ್ತೀರ್ಣನಾದ ವಿದ್ಯಾರ್ಥಿ, ಶಿಕ್ಷಕರು ಸರಿಯಾಗಿ ಪಾಠ ಮಾಡಿಲ್ಲವೆಂದು ಹೇಳುವುದು' ಈ ಹೊಂದಾಣಿಕೆಯ ತಂತ್ರಕ್ಕೆ ಉದಾಹರಣೆಯಾಗಿದೆ.**
(ಎ) ಪರಿಹಾರ (ಬಿ) ಉದಾತ್ತೀಕರಣ (ಸಿ) ಪ್ರಕ್ಷೇಪಣೆ (ಡಿ) ಪ್ರತಿಗಮನ

**7. ಸಮಸ್ಯಾತ್ಮಕ ವರ್ತನೆಯ ವಿದ್ಯಾರ್ಥಿಗಳನ್ನು ಅಧ್ಯಯನ ಮಾಡಲು ಉಪಯೋಗಿಸುವ ವಿಧಾನ**
(ಎ) ವ್ಯಕ್ತಿ ಅಧ್ಯಯನ (ಬಿ) ಅಂತರಾವಲೋಕನ (ಸಿ) ಪ್ರಾಯೋಗಿಕ (ಡಿ) ಅವಲೋಕನ

**8. ಈ ಹಂತವನ್ನು 'ಬೆಳವಣಿಗೆಯ ಬುಗ್ಗೆ' ಎಂದು ಕರೆಯುವರು.**
(ಎ) ಪೂರ್ವ ಬಾಲ್ಯಾವಸ್ಥೆ (ಬಿ) ಉತ್ತರ ಬಾಲ್ಯಾವಸ್ಥೆ (ಸಿ) ತಾರುಣ್ಯಾವಸ್ಥೆ (ಡಿ) ಶೈಶವಾವಸ್ಥೆ

**9. ಸೃಜನಶೀಲತೆಯ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಹಂತಗಳ ಅನುಕ್ರಮವು**
(ಎ) ಸಿದ್ಧತೆ, ಪರಿಪಾಕಾವಸ್ಥೆ, ಜ್ಞಾನೋದಯ, ತಾಳೆ ನೋಡುವಿಕೆ (ಬಿ) ತಾಳೆ ನೋಡುವಿಕೆ, ಜ್ಞಾನೋದಯ, ಸಿದ್ಧತೆ, ಪರಿಪಾಕಾವಸ್ಥೆ
(ಸಿ) ಜ್ಞಾನೋದಯ, ತಾಳೆ ನೋಡುವಿಕೆ, ಸಿದ್ಧತೆ, ಪರಿಪಾಕಾವಸ್ಥೆ (ಡಿ) ಪರಿಪಾಕಾವಸ್ಥೆ, ಸಿದ್ಧತೆ, ಜ್ಞಾನೋದಯ, ತಾಳೆ ನೋಡುವಿಕೆ

**10. ಮಾನಸಿಕ ವಯಸ್ಸು 15 ಇರುವ ಓರ್ವ ಹುಡುಗಿಯ I.Q. 125 ಇದ್ದರೆ ಅವಳ ದೈಹಿಕ ವಯಸ್ಸು ಎಷ್ಟು ?**
(ಎ) 10 (ಬಿ) 14 (ಸಿ) 16 (ಡಿ) 12

**11. ಈ ಕೆಳಗಿನವುಗಳಲ್ಲಿ ಯಾವುದು ಸುಖಾನ್ವೇಷಣ ತತ್ವದ ಪ್ರಕಾರ ಕೆಲಸ ನಿರ್ವಹಿಸುತ್ತದೆ.?**
(ಎ) ಇದ್ (ಬಿ) ಅಹಂ (ಸಿ) ಅತ್ಯಹಂ (ಡಿ) ಜಾಗೃತಪೂರ್ವ ಮನಸ್ಸು

**12. ಈ ಕೆಳಗಿನವುಗಳಲ್ಲಿ ಯಾವುದು ಮನೋಜನ್ಯ ಚಲನವಲನದ ಅತ್ಯಂತ ಉನ್ನತ ಮಟ್ಟದ ಸಾಧನೆ ?**
(ಎ) ಸ್ಫುಟತೆ (ಆರ್ಟಿಕ್ಯುಲೇಷನ್) (ಬಿ) ಮೌಲ್ಯಮಾಪನ (ಸಿ) ಸ್ವಾಭಾವೀರಣ (ಡಿ) ಅನುಕರಣೆ

**13. ಕೆಳಗಿನ ಯಾವ ಒಂದು ಜೊತೆಯ ಅಂಶಗಳನ್ನು ಒಂದೇ ನಾಣ್ಯದ ಎರಡು ಮುಖಗಳು ಎಂದು ಪರಿಗಣಿಸಲಾಗಿದೆ.?**
(ಎ) ಆಸಕ್ತಿ ಮತ್ತು ಅವಧಾನ (ಎಚ್ಚರಿಕೆ) (ಬಿ) ಆಸಕ್ತಿ ಮತ್ತು ಪರಿಪಕ್ವತೆ
(ಸಿ) ಪರಿಪಕ್ವತೆ ಮತ್ತು ಪ್ರೇರಣೆ (ಡಿ) ಮನೋಭಾವ ಮತ್ತು ಪರಿಪಕ್ವತೆ

**14. ಕೆಳಗಿನ ಯಾವುದನ್ನು 'ಸಂಶೋಧಕನ ಕಣ್ಣು' ಎಂದು ಕರೆಯುತ್ತಾರೆ ?**
(ಎ) ಸಂಭವನೀಯ ಕಾರಣಗಳ ವಿಶ್ಲೇಷಣೆ (ಬಿ) ನಿರ್ದಿಷ್ಟಗೊಳಿಸಿದ ಸಮಸ್ಯೆ
(ಸಿ) ಕಾರ್ಯ ಯೋಜನೆ (ಡಿ) ಕ್ರಿಯಾ ಪ್ರಾಕಲ್ಪನೆ

**15. ಈ ಹಂತದ ಜ್ಞಾನಾತ್ಮಕ ಬೆಳವಣಿಗೆಯಲ್ಲಿ ತಾರ್ಕಿಕ ಚಿಂತನೆ ಸಂಪೂರ್ಣವಾಗಿ ವಿಕಾಸಗೊಳ್ಳುತ್ತದೆ.**
(ಎ) ಸಂವೇಗನಾಗತಿ ಹಂತ (ಬಿ) ಮೂರ್ತಕಾರ್ಯಗಳ ಹಂತ
(ಸಿ) ಔಪಚಾರಿಕ ಕಾರ್ಯಗಳ ಹಂತ (ಡಿ) ಕಾರ್ಯಪೂರ್ವ ಹಂತ

**16. 'ಮಕ್ಕಳು ಚಲನಚಿತ್ರದಲ್ಲಿ ಪ್ರದರ್ಶಿತವಾಗುವ ಹಿಂಸಾತ್ಮಕ ವರ್ತನೆಯನ್ನು ನೋಡಿ ಕಲಿಯಬಹುದು' ಎಂಬ ತೀರ್ಮಾನವನ್ನು ಯಾವ ಮನೋವಿಜ್ಞಾನಿಯ ಮಾಡಿರುವ ಕೆಲಸದ ಆಧಾರದ ಮೇಲೆ ತೀರ್ಮಾನಿಸಬಹುದು?**

(ಎ) ಎಡ್ವರ್ಡ್ ಎಲ್, ಥಾರ್ನ್‌ಡೈಕ್ (ಬಿ) ಜೆ. ಬಿ. ವ್ಯಾಟ್ಸನ್ (ಸಿ) ಆಲ್‌ಬರ್ಟ್ ಬಂಡೂರ (ಡಿ) ಜೀನ್ ಪಿಯಾಜೆ

**17. ಲಿಂಗ ತಾರತಮ್ಯ ಬೆಳವಣಿಗೆಯ ಪ್ರಮುಖ ಮೂಲ**

(ಎ) ಸಮುದಾಯ (ಬಿ) ಸಮೂಹ ಮಾಧ್ಯಮ (ಸಿ) ಶಾಲೆ (ಡಿ) ಕುಟುಂಬ

**18. ನ್ಯೂನ್ಯತೆಯುಳ್ಳ ಮಕ್ಕಳಿಗಾಗಿ ಇರುವ ಕೇಂದ್ರೀಯ ನಿಯೋಜಿತ ಸಮಗ್ರ ಶಿಕ್ಷಣದ ಮೂಲಕ ಶೈಕ್ಷಣಿಕ ಅವಕಾಶಗಳನ್ನು ಇಲ್ಲಿ ನೀಡುವ ಗುರಿ ಹೊಂದಿದೆ.**

(ಎ) ಸಾಮಾನ್ಯ ಶಾಲೆಗಳು (ಬಿ) ವಿಶೇಷ ಶಾಲೆಗಳು

(ಸಿ) ಮುಕ್ತ ಶಾಲೆಗಳು (ಡಿ) ಅಂಧ ಪರಿಹಾರ ಸಂಘ ಶಾಲೆಗಳು

19. ನೈತಿಕ ಬೆಳವಣಿಗೆಯ ಸಿದ್ಧಾಂತವನ್ನು ಪ್ರತಿಪಾದಿಸಿದವರು

(ಎ) ಕೋಲ್‌ಬರ್ಗ್ (ಬಿ) ಬಂಡೂರ (ಸಿ) ಬ್ರೂನರ್ (ಡಿ) ಗ್ಯಾನೆ

**20. ಬಹುಮುಖ ಬುದ್ಧಿಶಕ್ತಿಯ ಸಿದ್ಧಾಂತದ ಪ್ರಕಾರ ಎಲ್ಲಾ ರೀತಿಯ ಪ್ರಾಣಿಗಳನ್ನು ಸಸ್ಯಗಳನ್ನು ಹಾಗೂ ಲವಣಗಳನ್ನು ಗುರುತಿಸುವ ಹಾಗೂ ವರ್ಗೀಕರಿಸುವ ಸಾಮರ್ಥ್ಯವನ್ನು ಹೀಗೆ ಕರೆಯುವರು.**

(ಎ) ಅಂತರ್‌ವ್ಯಕ್ತ ಬುದ್ಧಿಶಕ್ತಿ (ಬಿ) ಶಾಬ್ದಿಕ ಭಾಷಾ ಬುದ್ಧಿಶಕ್ತಿ (ಸಿ) ತಾರ್ಕಿಕ ಗಣಿತೀಯ ಬುದ್ಧಿಶಕ್ತಿ (ಡಿ) ಸಹಜ ಬುದ್ಧಿಶಕ್ತಿ

**21. ಡಿಸ್‌ಲೆಕ್ಸಿಯಾವು ಇದಕ್ಕೆ ಸಂಬಂಧಿಸಿದ ಸಮಸ್ಯೆಯಾಗಿದೆ**

(ಎ) ಓದುವುದು (ಬಿ) ಮಾತನಾಡುವುದು (ಸಿ) ಮಾತನಾಡುವುದು ಮತ್ತು ಆಲಿಸುವುದು (ಡಿ) ಕೇಳಿಸಿಕೊಳ್ಳುವುದು

**22. ಒಬ್ಬ ವಿದ್ಯಾರ್ಥಿಯು ತನ್ನ ಸಹಪಾಠಿಗಳೊಂದಿಗೆ ಒರಟಾಗಿ ವರ್ತಿಸುವುದು ಹಾಗೂ ಶಾಲಾ ನಿಯಮಗಳಿಗೆ ಹೊಂದಿಕೊಳ್ಳುವುದಿಲ್ಲ. ಈ ವಿದ್ಯಾರ್ಥಿಗೆ ನೀಡಬೇಕಾದ ಅವಶ್ಯಕ ಸಹಾಯದ ವಲಯ**

(ಎ) ಉನ್ನತ ಮಟ್ಟದ ಕೌಶಲಗಳು (ಬಿ) ಜ್ಞಾನಾತ್ಮಕ ವಲಯ (ಸಿ) ಮನೋಜನ್ಯ ಕ್ರಿಯಾವಲಯ (ಡಿ) ಭಾವನಾತ್ಮಕ ವಲಯ

**23. ನೈಜವಾದ ನೈತಿಕ ಪ್ರಜ್ಞೆಯು ವ್ಯಕ್ತವಾಗುವ ಹಂತವು**

(ಎ) ತಾರುಣ್ಯಾವಸ್ಥೆ (ಬಿ) ವಯಸ್ಕ (ಸಿ) ಪೂರ್ವ ಬಾಲ್ಯಾವಸ್ಥೆ (ಡಿ) ಉತ್ತರ ಬಾಲ್ಯಾವಸ್ಥೆ

**24. ಈ ಹೇಳಿಕೆ 'ಗಂಡಸರು ಹೆಂಗಸರಿಗಿಂತ ಹೆಚ್ಚು ಬುದ್ಧಿವಂತರು'**

(ಎ) ನಿಜ (ಬಿ) ಸುಳ್ಳು (ಸಿ) ಲಿಂಗ ತಾರತಮ್ಯವನ್ನು ತೋರಿಸುತ್ತದೆ. (ಡಿ) ಕೆಲವು ಜನಾಂಗಗಳಲ್ಲಿ ಸತ್ಯ

**25. ಒಂದು ಸಮೂಹದ ಸದಸ್ಯರ ಸಂಬಂಧವನ್ನು ಅಧ್ಯಯನ ಮಾಡಲು ಈ ಕೆಳಗಿನವುಗಳಲ್ಲಿ ಯಾವುದನ್ನು ಬಳಸಲಾಗುತ್ತದೆ.?**

(ಎ) ಸಮಾಜ ಮಿತಿ ತಂತ್ರ (ಬಿ) ಪ್ರಕ್ಷೇಪಣಾ ತಂತ್ರ (ಸಿ) ದರ್ಜಾ ಮಾಪನ (ಡಿ) ಸಾಂಧರ್ಭಿಕ ಪರೀಕ್ಷೆ

**26. ಅನಿಮಿಸಮ್ ಲಕ್ಷಣವು ಈ ಹಂತದ ಜ್ಞಾನಾತ್ಮಕ ಬೆಳವಣಿಗೆಯ ಮುಖ್ಯ ಲಕ್ಷಣ.**

(ಎ) ಸಂವೇದನಾ ಗತಿ ಹಂತ (ಬಿ) ಕಾರ್ಯಪೂರ್ವ ಹಂತ

(ಸಿ) ಮೂರ್ತ ಕಾರ್ಯಗಳ ಹಂತ (ಡಿ) ಔಪಚಾರಿಕ ಕಾರ್ಯಗಳ ಹಂತ

**27. ಪುನರ್ಬಲನದ ಉಪಯೋಗದಿಂದ**

(ಎ) ಬುದ್ಧಿಶಕ್ತಿ ಉತ್ತಮಗೊಳ್ಳುತ್ತದೆ (ಬಿ) ಸಾಮಾಜಿಕ ಸಂಬಂಧಗಳನ್ನು ಬೆಳೆಸುತ್ತದೆ.

(ಸಿ) ಮಾನಸಿಕ ಆರೋಗ್ಯ ವೃದ್ಧಿಸುತ್ತದೆ (ಡಿ) ಪ್ರತಿಕ್ರಿಯೆಯನ್ನು ಬಲಗೊಳಿಸುತ್ತದೆ.

**28. ವಿಸ್ಮೃತಿಗೆ ಇದು ಒಂದು ಪ್ರಮುಖ ಕಾರಣವಾಗಿದೆ.**

(ಎ) ಭಯ ಮತ್ತು ಆತಂಕದಿಂದ ಆಗುವ ಭಾವನಾತ್ಮಕ ತಡೆ (ಬಿ) ಧನಾತ್ಮಕ ವರ್ಗಾವಣೆ

(ಸಿ) ಮನರಂಜನೆಯ ಕೊರತೆ (ಡಿ) ಸಹಪಾಠಿಗಳ ನಡುವೆ ಸ್ಪರ್ಧೆ

**29. ಒಂದು ಮಗುವು ನೂರ ಹತ್ತು ಎಂಬ ಸಂಖ್ಯೆಯನ್ನು 10010 ಎಂದು ಬರೆಯುವುದು. ಈ ದೌರ್ಬಲ್ಯವನ್ನು ಹೀಗೆನ್ನುತ್ತಾರೆ.**

(ಎ) ಡಿಸ್‌ಕ್ಯಾಲ್ಸಿಯಾ (ಬಿ) ಡಿಸ್‌ಗ್ರಾಫಿಯಾ (ಸಿ) ಡಿಸ್‌ಕ್ಯಾಲ್ಕುಲಿಯಾ (ಡಿ) ಡಿಸ್‌ಕ್ಯಾಲಿಗ್ರಾಫಿಯಾ

**30. ಆಶ್ರಿತ ನ್ಯೂನ್ಯತೆ ಇರುವ ಮಕ್ಕಳನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುವವರು.**

(ಎ) ಮನೋವೈದ್ಯರು (ಬಿ) ಶಿಕ್ಷಕರು (ಸಿ) ಸ್ನೇಹಿತರು (ಡಿ) ಪೋಷಕರು

## ಕೀ – ಉತ್ತರಗಳು

| | | | | | |
|---|---|---|---|---|---|
| 1 | ಬಿ | 11 | ಎ | 21 | ಎ |
| 2 | ಸಿ | 12 | ಸಿ | 22 | ಡಿ |
| 3 | ಎ | 13 | ಎ | 23 | ಎ |
| 4 | ಸಿ | 14 | ಡಿ | 24 | ಸಿ |
| 5 | ಬಿ | 15 | ಸಿ | 25 | ಎ |
| 6 | ಸಿ | 16 | ಸಿ | 26 | ಬಿ |
| 7 | ಎ | 17 | ಡಿ | 27 | ಡಿ |
| 8 | ಸಿ | 18 | ಎ | 28 | ಎ |
| 9 | ಎ | 19 | ಎ | 29 | ಸಿ |
| 10 | ಡಿ | 20 | ಡಿ | 30 | ಡಿ |

**TET -2014 Paper - Child Development & Pedogogy 6-8th Standard**

1. ಈ ಕೆಳಗಿನವುಗಳಲ್ಲಿ ಯಾವುದು ಬೆಳವಣಿಗೆಯ ಗುಣಲಕ್ಷಣ?
(ಎ) ಪ್ರಗತಿಪರತೆ (ಬಿ) ಚಲನಾತ್ಮಕತೆ (ಸಿ) ನಿಶ್ಚಲತೆ (ಡಿ) ನಿರಂತರತೆ

2. ಒಬ್ಬ ಪೋಷಕನು ತನ್ನ ಐದು ವರ್ಷದ ಮಗುವನ್ನು ಒಂದನೇ ತರಗತಿಗೆ ಪ್ರವೇಶ ದಾಖಲಾತಿ ಮಾಡಲು ಬಯಸಿದರೆ, ಅವನಿಗೆ ನೀವು ನೀಡುವ ಸಲಹೆಯು ಈ ಕೆಳಗಿನ ಯಾವ ಅಂಶದ ಮೇಲೆ ಅವಲಂಬಿತವಾಗಿರುತ್ತದೆ.?
(ಎ) ಅಭಿಪ್ರೇರಣೆ (ಬಿ) ಪಕ್ವತೆ (ಸಿ) ಸ್ಮೃತಿ (ಡಿ) ಆಸಕ್ತಿ

3. ವಿದ್ಯಾರ್ಥಿ ಮೋಹನನ ದೈಹಿಕ ವಯಸ್ಸು 10 ವರ್ಷಗಳಾಗಿದ್ದು, ಅವನ ಮಾನಸಿಕ ವಯಸ್ಸು 8 ವರ್ಷಗಳಾಗಿದ್ದರೆ, ಅವನ ಬುದ್ಧಿ ಶಕ್ತಿ ಸೂಚ್ಯಂಕವು
(ಎ) 80 (ಬಿ) 120 (ಸಿ) 140 (ಡಿ) 100

4.. ಅನುವಂಶೀಯ ಗುಣಗಳನ್ನು ತಲೆಮಾರಿಗೆ ಕೊಂಡೊಯ್ಯುವ ನಿಜವಾದ ಜೈವಿಕ ಅಂಶಗಳು.
(ಎ) ವರ್ಣತಂತುಗಳು (ಬಿ) ಬೀಜಾಣುಗಳು (ಸಿ) ಗುಣಾಣುಗಳು (ಡಿ) ಅಂಡಾಣುಗಳು

5. ವರ್ತನೆಯನ್ನು ಅತ್ಯಂತ ವಸ್ತುನಿಷ್ಠ ಹಾಗೂ ವೈಜ್ಞಾನಿಕವಾಗಿ ಅಧ್ಯಯನ ಮಾಡುವ ವಿಧಾನ
(ಎ) ಅವಲೋಕನ (ಬಿ) ವ್ಯಕ್ತಿ ಅಧ್ಯಯನ (ಸಿ) ಪ್ರಾಯೋಗಿಕ ವಿಧಾನ (ಡಿ) ಅಂತರಾವಲೋಕನ

6. ಸಾಮಾಜಿಕ – ಸಾಂಸ್ಕೃತಿಕ ಸಿದ್ಧಾಂತವನ್ನು ಪ್ರತಿಪಾದಿಸಿದವರು
(ಎ) ಬಂಡೂರ (ಬಿ) ಬ್ರೂನರ್ (ಸಿ) ಆಲ್‌ಬರ್ಟ್ ಎಲ್ಲಿಸ್ (ಡಿ) ವೈಗೋಟ್ ಸ್ಕಿ

7. ನೈತಿಕ ಬೆಳವಣಿಗೆಯ ಸಿದ್ಧಾಂತವನ್ನು ಪ್ರತಿಪಾದಿಸಿದವರು
(ಎ) ಕ್ಹೋಲ್ ಬರ್ಗ್ (ಬಿ) ಪಿಯಾಜೆ (ಸಿ) ಬ್ರೂನರ್ (ಡಿ) ಗ್ಯಾನೆ

8. ಲಿಂಗ ತಾರತಮ್ಯಕ್ಕೆ ಕಾರಣವಾದ ಪ್ರಮುಖ ಅಂಶವೆಂದರೆ
(ಎ) ಸ್ನೇಹಿತರು (ಬಿ) ಸಂಬಂಧಿಕರು (ಸಿ) ಪೋಷಕರು (ಡಿ) ಪೋಷಕರು ಮತ್ತು ಶಿಕ್ಷಕರು

9. ಬಡಮಕ್ಕಳನ್ನು ಶಾಲೆಗೆ ಆಕರ್ಷಿಸಲು ಅನುಸರಿದುವ ಪರಿಣಾಮಕಾರಿ ವಿಧಾನವೆಂದರೆ
(ಎ) ಉಚಿತ ಶಿಕ್ಷಣ (ಬಿ) ಉಚಿತ ಮಧ್ಯಾಹ್ನದೂಟ ವ್ಯವಸ್ಥೆ
(ಸಿ) ಉಚಿತ ಪುಸ್ತಕ ಮತ್ತು ಸಮವಸ್ತ್ರ ವಿತರಣೆ (ಡಿ) ಮೇಲಿನ ಎಲ್ಲವೂ

10. ಜೀನ್ ಪಿಯಾಜೆಯವರ ಜ್ಞಾನಾತ್ಮಕ ಬೆಳವಣಿಗೆಯ ಮೂರನೇ ಹಂತವು
(ಎ) ಮೂರ್ತಕಾರ್ಯಗಳ ಹಂತ (ಬಿ) ಕಾರ್ಯಪೂರ್ವ ಹಂತ
(ಸಿ) ಸಂವೇದನಾ ಗತಿ ಹಂತ (ಡಿ) ಔಪಚಾರಿಕ ಕಾರ್ಯಗಳ ಹಂತ

11. ಶಾಸ್ತ್ರೀಯ ಕಲಿಕೆಯನ್ನು ಪ್ರತಿಪಾದಿಸಿದವರು.
(ಎ) ಪಾವ್‌ಲೋವ್ (ಬಿ) ಸ್ಕಿನ್ನರ್ (ಸಿ) ಥಾರ್ನ್‌ಡೈಕ್ (ಡಿ) ಕೋಹ್ಲರ್

12. ಸ್ಮೃತಿಯ ಪ್ರಕ್ರಿಯೆಲ್ಲಿನ ಹಂತಗಳ ಅನುಕ್ರಮವು
(ಎ) ಧಾರಣೆ, ದಾಖಲೆ, ಸ್ಮರಿಸುವುದು, ಗುರುತಿಸುವುದು. (ಬಿ) ದಾಖಲೆ, ಧಾರಣೆ, ಸ್ಮರಿಸುವುದು, ಗುರುತಿಸುವುದು.
(ಸಿ) ಸ್ಮರಿಸುವುದು, ದಾಖಲೆ, ಗುರುತಿಸುವುದು, ಧಾರಣೆ (ಡಿ) ಗುರುತಿಸುವುದು, ದಾಖಲೆ, ಧಾರಣೆ, ಸ್ಮರಿಸುವುದು.

13. ಬುದ್ಧಿಶಕ್ತಿ ಸೂಚ್ಯಾಂಕದ ಹಂಚಿಕೆಯನ್ನು ಪ್ರತಿನಿಧಿಸುವ ರೇಖೆಯು.
(ಎ) ಸಾಮಾನ್ಯ ಸಂಭಾವ್ಯತಾ ವಕ್ರರೇಖೆ (ಬಿ) ಧನಾತ್ಮಕ ವಿಷಯ ವಕ್ರರೇಖೆ
(ಸಿ) ಋಣಾತ್ಮಕ ವಿಷಯ ವಕ್ರರೇಖೆ (ಡಿ) ದ್ವಿಬಹುಲಕ ವಕ್ರರೇಖೆ

14. ಜ್ಞಾನಾತ್ಮಕ ವಿಕಾಸದ ಯಾವ ಹಂತದಲ್ಲಿ ತಾರ್ಕಿಕ ಚಿಂತನೆ ಸಂಪೂರ್ಣವಾಗಿ ವಿಕಾಸಗೊಳ್ಳುತ್ತದೆ ?
(ಎ) ಸಂವೇದನಾ ಹಂತ (ಬಿ) ಮೂರ್ತಕಾರ್ಯಗಳ ಹಂತ
(ಸಿ) ಔಪಚಾರಿಕ ಕಾರ್ಯಗಳ ಹಂತ (ಡಿ) ಕಾರ್ಯಪೂರ್ವ ಹಂತ

15. ತರುಣರ ಸಾಮಾಜಿಕ ವಿಕಾಸಕ್ಕೆ ಉದಾಹರಣೆ ಎಂದರೆ
(ಎ) ಸಾಹಸ ಪ್ರವೃತಿ (ಬಿ) ಗುಂಪು ರಚನೆ (ಸಿ) ಲೈಂಗಿಕ ಆಸಕ್ತಿ (ಡಿ) ವಿಮರ್ಶಾತ್ಮಕ ಸಾಮರ್ಥ್ಯ

16. ಮಾನಸಿಕ ವಯಸ್ಸಿನ ಪರಿಕಲ್ಪನೆಯನ್ನು ಮೊಟ್ಟ ಮೊದಲು ಪರಿಚಯಿಸಿದವರು ಯಾರು.?
(ಎ) ಟರ್ಮನ್ (ಬಿ) ಆಲ್‌ಫ್ರೆಡ್ ಬೀನೆ (ಸಿ) ವಿಲಿಯಂ ಸ್ಟರ್ನ್ (ಡಿ) ರೇವನ್

17. 'ಆತ್ಮಹಂ' ತತ್ಮದಿಂದ ಪ್ರಭಾವಿಸಲ್ಪಟ್ಟಿದೆ.
(ಎ) ಸುಖಾನುಭವ (ಬಿ) ವಾಸ್ತವಿಕತೆ (ಸಿ) ನೈತಿಕತೆ (ಡಿ) ತಾರ್ಕಿಕತೆ

18. ವರ್ತನಾ ಸಮಸ್ಯೆಯ ಮಕ್ಕಳನ್ನು ಅಧ್ಯಯನ ಮಾಡುವ ವಿಧಾನ ಯಾವುದು ?
(ಎ) ಅಂತರಾವಲೋಕನ (ಬಿ) ಪ್ರಾಯೋಗಿಕ ಪದ್ಧತಿ
(ಸಿ) ವೀಕ್ಷಣೆ (ಡಿ) ವ್ಯಕ್ತಿ ಅಧ್ಯಯನ

**19. ಬುದ್ಧಿಶಕ್ತಿಯ ಕಾರ್ಯನಿರ್ವಹಣಾ ಪರೀಕ್ಷೆಯ ಮೂಲಕ ಅಳೆಯಲ್ಪಡುವ ಸಾಮರ್ಥ್ಯ**
(ಎ) ಕೈಚಳಕ (ಬಿ) ಭಾಷೆ (ಸಿ) ಸೃಜನಶೀಲತೆ (ಡಿ) ಸಂಖ್ಯಾ ಸಂಬಂಧಿತ
**20. ಮೆದುಳನ್ನು ಕಾರ್ಯಪಟುಗೊಳಿಸುವ ತಂತ್ರವನ್ನು ಈ ವಿದ್ಯಾರ್ಥಿಗಳಿಗೆ ಉಪಯೋಗಿಸುವರು.**
(ಎ) ನಿಧಾನವಾಗಿ ಕಲಿಯುವವರು. (ಬಿ) ಸೃಜನಶೀಲ ಮಕ್ಕಳು (ಸಿ) ಮಾನಸಿಕ ಸವಾಲುಗಳುಳ್ಳ ಮಕ್ಕಳು (ಡಿ) ಅಪೂರ್ಣ ಸಾಧಕರು
**21. ವಿಷಯ ಪ್ರಚೋದಕ ಪರೀಕ್ಷೆಯು (ಟಿಎಟಿ) ಅಳೆಯುವುದು**
(ಎ) ಮನೋವೃತ್ತಿ (ಬಿ) ಸೃಜನಶೀಲತೆ (ಸಿ) ಬುದ್ಧಿಶಕ್ತಿ (ಡಿ) ವ್ಯಕ್ತಿತ್ವ
**22. ಈ ಕೆಳಗಿನ ಯಾವ ಉದಾಹರಣೆಯು ಕ್ರಿಯಾ ಪ್ರಸೂತ ಅನುಬಂಧ ಕಲಿಕೆಯನ್ನು ಒಳಗೊಂಡಿದೆ ?**
(ಎ) ವರ್ತನೆಯ ಮಾರ್ಪಾಟು (ಬಿ) ಅಭ್ಯಾಸಗಳನ್ನು ಬಿಡಿಸುವುದು (ಸಿ) ಕೇಳದೆಯೇ ಪ್ರತಿಕ್ರಿಯಿಸುವುದು (ಡಿ) ಪರಿಕಲ್ಪನೆ ಮೂಡಿಸುವುದು
**23. ಕೆಳಗಿನ ಯಾವ ಒಂದು ಜೊತೆಯ ಅಂಶಗಳನ್ನು ಒಂದೇ ನಾಣ್ಯದ ಎರಡು ಮೂಖಗಳು' ಎಂದು ಪರಿಗಣಿಸಲಾಗಿದೆ ?**
(ಎ) ಆಸಕ್ತಿ ಮತ್ತು ಅವಧಾನ (ಬಿ) ಆಸಕ್ತಿ ಮತ್ತು ಪರಿಕಲ್ಪನೆ
(ಸಿ) ಪರಿಪಕ್ವತೆ ಮತ್ತು ಪ್ರೇರಣೆ (ಡಿ) ಮನೋಭಾವ ಮತ್ತು ಪರಿಪಕ್ವತೆ
**24. ಸೈಕಲ್ ಕಲಿಕೆಯ ಈ ಕೆಳಗಿನ ಯಾವ ಕಲಿಕಾ ವಿಧಾನಕ್ಕೆ ಉದಾಹರಣೆಯಾಗಿದೆ ?**
(ಎ) ಶಾಸ್ತ್ರೋಕ್ತ ಕಲಿಕೆ (ಬಿ) ಕ್ರಿಯಾಜನ್ಯ ಕಲಿವು
(ಸಿ) ಒಳನೋಟ ಕಲಿವು (ಡಿ) ಪ್ರಯತ್ನ- ಪ್ರಮಾದ ಕಲಿವು
**25. ಒಂದು ಯಂತ್ರವನ್ನು ರಿಪೇರಿ ಮಾಡುವ ತಂತ್ರವು, ಒಂದು ಕಾರನ್ನು ಓಡಿಸಲು ನೆರವಾಗುವುದಿಲ್ಲ, ಇದು ಯಾವ ರೀತಿಯ ಕಲಿಕೆಯ ವರ್ಗಾವಣೆ ?**
(ಎ) ಧನಾತ್ಮಕ ವರ್ಗಾವಣೆ (ಬಿ) ಋಣಾತ್ಮಕ ವರ್ಗಾವಣೆ
(ಸಿ) ಶೂನ್ಯ ವರ್ಗಾವಣೆ (ಡಿ) ಮೇಲಿನ ಎಲ್ಲವೂ
**26. ಶಾಲೆಗಳಲ್ಲಿ ಸಾಮಾನ್ಯ ಮಕ್ಕಳೊಡನೆ ವಿಶೇಷ ಮಕ್ಕಳನ್ನು ಸೇರಿಸಿ ನೀಡುವ ಶಿಕ್ಷಣವು**
(ಎ) ವಿಶೇಷ ಶಿಕ್ಷಣ (ಬಿ) ಔಪಚಾರಿಕ ಶಿಕ್ಷಣ
(ಸಿ) ಅನೌಪಚಾರಿಕ ಶಿಕ್ಷಣ (ಡಿ) ಸಮನ್ವಯ ಶಿಕ್ಷಣ
**27. ಡಿಸ್‌ಕ್ಯಾಲ್ಕುಲಿಯಂ ಎಂಬ ಸಮಸ್ಯೆಯು ಯಾವುದಕ್ಕೆ ಸಂಬಂಧಿಸಿದೆ ?**
(ಎ) ಓದುವುದು (ಬಿ) ಬರೆಯುವುದು
(ಸಿ) ಅಂಕಗಣಿತ (ಡಿ) ಕಾಗುಣಿತ
**28. ಸೃಜಶೀಲತೆಯು ಯಾವ ಅಂಶದ ಮೇಲೆ ಅವಲಂಬಿತವಾಗಿದೆ ?**
(ಎ) ಬಹುಮುಖ ಚಿಂತನೆ (ಬಿ) ಏಕಮುಖ ಚಿಂತನೆ
(ಸಿ) ವಿವೇಚನಾತ್ಮಕ ಚಿಂತನೆ (ಡಿ) ಅಮೂರ್ತ ಚಿಂತನೆ
**29. ತರುಣರ ವಿಕಾಸಾತ್ಮಕ ಕಾರ್ಯಗಳನ್ನು ಪರಿಚಯಿಸಿದವರು ಯಾರು ?**
(ಎ) ಹ್ಯಾವಿಗ್ ಹರ್ಸ್ಟ್ (ಬಿ) ಸ್ಟ್ಯಾನ್ಲಿ ಹಾಲ್
(ಸಿ) ಹರ್ ಲಾಕ್ (ಡಿ) ಹ್ಯಾಡ್ ಫೀಲ್ಡ್
**30. ಈ ಕೆಳಗಿನ ಯಾವುದನ್ನು ಕ್ರಿಯಾ ಸಂಶೋಧಕನ ಕಣ್ಣು ಎಂದು ಕರೆಯುತ್ತಾರೆ ?**
(ಎ) ಸಂಭವನೀಯ ಕಾರಣಗಳ ವಿಶ್ಲೇಷಣೆ (ಬಿ) ನಿರ್ದಿಷ್ಟಗೊಳಿಸಿದ ಸಮಸ್ಯೆ
(ಸಿ) ಕಾರ್ಯ ಯೋಜನೆ (ಡಿ) ಕ್ರಿಯಾ ಪ್ರಾಕಲ್ಪನೆ

## ಕೀ – ಉತ್ತರಗಳು

| | | | | | |
|---|---|---|---|---|---|
| 1 | ಸಿ | 11 | ಎ | 21 | ಡಿ |
| 2 | ಬಿ | 12 | ಬಿ | 22 | ಸಿ |
| 3 | ಎ | 13 | ಎ | 23 | ಎ |
| 4 | ಸಿ | 14 | ಸಿ | 24 | ಡಿ |
| 5 | ಸಿ | 15 | ಬಿ | 25 | ಸಿ |
| 6 | ಡಿ | 16 | ಬಿ | 26 | ಡಿ |
| 7 | ಎ | 17 | ಸಿ | 27 | ಸಿ |
| 8 | ಡಿ | 18 | ಡಿ | 28 | ಎ |
| 9 | ಡಿ | 19 | ಎ | 29 | ಎ |
| 10 | ಎ | 20 | ಬಿ | 30 | ಡಿ |